

ಸುಮಾರು 9 ಭಯಾನಕ ತಿರುವುಗಳನ್ನು ಹೊಂದಿರುವ ಈ ಘಾಟ್‌ನ ಉದ್ದ 14 ಕಿ.ಮೀ. ಪ್ರಯಾಣಿಸಲಂತೂ ಕನಿಷ್ಠ ಒಂದು ಗಂಟೆ ಬೇಕೇ ಬೇಕು. ಕಲ್ಲೀಕೋಟೆಗೆ ಹೋಗುವಾಗ ಈ ಘಾಟ್‌ನಲ್ಲಿ ಇಳಿಯುವ ಅವಕಾಶ. ಮೈಸೂರಿಗೆ ಬರುವಾಗ ಇದೇ ಘಾಟ್ ಹತ್ತಿ ಬರಬೇಕು. ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಘಾಟ್ ಇರುವುದರಿಂದ ಇಲ್ಲಿ ವಾಹನ ದಟ್ಟಣೆಯ ಬಗ್ಗೆ ಹೇಳೋದೇ ಬೇಡ. ಬೆಳ್ಳಂಬೆಳಿಗ್ಗೆ, ಮಧ್ಯಾಹ್ನ, ಮಧ್ಯ ರಾತ್ರಿ ಯಾವುದೇ ಹೊತ್ತಿನಲ್ಲಿ ಹೋದರೂ ಇರುವೆಗಳ ಹಾಗೆ ವಾಹನ ಸಂಚಾರ ಇರುವುದು ಸಾಮಾನ್ಯ.

ಹೋಗುವ ರಭಸದಲ್ಲಿ ಯಾವುದಾದರೂ ವಾಹನ ಇನ್ನೊಂದು ವಾಹನಕ್ಕೆ 'ಕಿಸ್' ಮಾಡಿದರಂತೂ ಮುಗೀತು– ಇರುವೆ ಸಾಲಿನಂತೆ ಎಲ್ಲ ವಾಹನಗಳು ನಿಂತೇ ಬಿಡುತ್ತದೆ. ಮತ್ತೆ ಎಲ್ಲಾ ಸರಿಹೋಗಬೇಕಾದರೆ ಇತ್ತಂಡಗಳಲ್ಲಿ ರಾಜಿಯಾಗಬೇಕು. ಅಷ್ಟು ಹೊತ್ತಿಗೆ ಅರ್ಧ ಗಂಟೆ ಕಳೆದಿರುತ್ತದೆ. ಸಂಜೆಯ ಹೊತ್ತಿನಲ್ಲಂತೂ ಘಾಟ್‌ನಲ್ಲಿ ಈ ರೀತಿಯ ರಸ್ತೆತಡೆ ಸಾಮಾನ್ಯ ದೃಶ್ಯ. ಆಗ ಘಾಟ್ ಏರುತ್ತಿರುವ ವಾಹನಗಳು ಸಾಲುಸಾಲಾಗಿ ನಿಂತಿರುವುದನ್ನು ನೋಡುವುದೇ ಒಂದು ಸೊಬಗು.

ಎರಡೂ ಬದಿಯಲ್ಲಿ ಭಯಾನಕ ಪ್ರಪಾತಗಳು! ಕಾಡಿನ ಪ್ರಕೃತಿ ಸೌಂದರ್ಯವನ್ನು ಸವಿಯುತ್ತಾ 9 ತಿರುವುಗಳಲ್ಲಿ ಪ್ರಯಾಣಿಸಬಹುದು. ಘಾಟ್ ಶುರುವಾಗುವ ಕಡೆಯಲ್ಲಿ ಸ್ವಲ್ಪ ಪಾರ್ಕಿಂಗ್‌ಗೆ ಅವಕಾಶವಿದ್ದು ಅಲ್ಲಿ ಪ್ರವಾಸಿ ವಾಹನಗಳು ಪಾರ್ಕ್ ಮಾಡಿ ಪ್ರಕೃತಿ ವೀಕ್ಷಿಸುವ ಅವಕಾಶವಿದೆ. ಸುತ್ತ ನೋಡಿದರೆ ಪರ್ವತಗಳ ಮೋಹಕ ದೃಶ್ಯ. ಐಸ್‌ಕ್ರೀಂ ಅಥವಾ ಇತರ ತಿಂಡಿ ತಿನಿಸುಗಳನ್ನು ಇಲ್ಲೇ ಖರೀದಿಸಿದರೆ ಉತ್ತಮ. ಇಲ್ಲದಿದ್ದರೆ ಘಾಟ್ ಮುಗಿಯುವವರೆಗೆ ಯಾವುದೇ ಅಂಗಡಿಗಳು ಸಿಗುವುದಿಲ್ಲ, ಐಸ್‌ಕ್ರೀಂ ಮೆಲ್ಲುತ್ತಾ ಕ್ಯಾಮರಾ ಕ್ಲಿಕ್ಕಿಸುತ್ತ ನಿಲ್ಲುವ ಪ್ರವಾಸಿಗರು ನೂರಾರು ಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ಅಲ್ಲಿಂದ ಕೆಳಗೆ ನೋಡಿದರೆ ಕೆಲವೊಂದು 'ಎಸ್' ಆಕಾರದ ತಿರುವುಗಳು, ಅದರಲ್ಲಿ ಪ್ರಯಾಣಿಸುವ ವಾಹನಗಳು ಬೆಂಕಿ ಪೊಟ್ಟಣದಂತೆ ಕಾಣುತ್ತವೆ.

ಈ ಘಾಟ್‌ನ ವಾತಾವರಣ ಸ್ವಲ್ಪ ಊಸರವಳ್ಳಿ ತರಹ. ಘಾಟ್ ಪ್ರಾರಂಭದಲ್ಲಿ ಸಹಜವಾಗಿ ಎತ್ತರ ಪ್ರದೇಶವಾದ್ದರಿಂದ ಚಳಿಯ ವಾತಾವರಣವಿರುತ್ತದೆ. ಕೆಳಕೆಳಗೆ ಬಂದರಂತೂ ಒಮ್ಮೆಲೇ ಮಂಜು ಆವರಿಸಿ ಪ್ರಕೃತಿಯನ್ನು ಬೆಳ್ಳನೆ ಮಾಡಿ ಬಿಡುತ್ತದೆ. ಮಳೆಗಾಲದಲ್ಲಿ ಇಲ್ಲಿ ಪ್ರಯಾಣಿಸಿದರೆ ಸಣ್ಣ ತೊರೆ, ಜಲಪಾತಗಳು ಧುಮ್ಮಿಕ್ಕುವುದನ್ನೂ ಕಣ್ಣು ತುಂಬಿಕೊಳ್ಳಬಹುದು.

ಈ ಘಾಟ್‌ನಲ್ಲಿ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಸರಕು ಸಾಗಣೆಕೆ– ಪ್ರಯಾಣಿಕ ವಾಹನಗಳು ಸಂಚರಿಸುತ್ತವೆ. ಇದು ರಾಷ್ಟ್ರೀಯ ಹೆದ್ದಾರಿ ಆಗಿದ್ದರೂ ನಮ್ಮ ಶಿರಾಡಿ ಘಾಟ್‌ನಂತೆ ಇಲ್ಲಿನ ರಸ್ತೆಗಳು ತೋಪೆದ್ದು ಹೋಗಿಲ್ಲ. ಇಡೀ ಘಾಟ್‌ನಲ್ಲಿ ಹುಡುಕಿದರೂ ರಸ್ತೆಯ ಮಧ್ಯೆ ಒಂದೇ ಒಂದು ಗುಂಡಿ ಸಿಗುವುದು ಕಷ್ಟ. ರಸ್ತೆಗಳು ಅಷ್ಟು ಉತ್ತಮವಾಗಿದೆ!

ಇಲ್ಲಿನ ತಿರುವುಗಳನ್ನು ನೋಡುವಾಗ ಫಕ್ಕನೇ ನಮ್ಮ ಆಗುಂಬೆ ಘಾಟ್ ನೆನಪಾದರೂ ಅಚ್ಚರಿಯಿಲ್ಲ. ಕೆಲವೊಂದು ತಿರುವುಗಳಲ್ಲಿ ಟರ್ನ್ ಮಾಡಬೇಕಾದರೆ ಸ್ಟೇರಿಂಗ್ ತಿರುಗಿಸಿ ತಿರುಗಿಸಿ ಸಾಕಾಗಿ ಹೋಗುತ್ತದೆ. ಇಲ್ಲಿ ಡ್ರೈವ್ ಮಾಡುವ ವಾಹನಗಳಲ್ಲಿ ಪವರ್ ಸ್ಟೇರಿಂಗ್ ಇದ್ದರೇನೆ ಉತ್ತಮ. ಇಲ್ಲದಿದ್ದರೆ ಘಾಟ್ ಸೆಕ್ಷನ್ ಮುಗಿದ ನಂತರ ಡ್ರೈವಿಂಗ್ ಸೀಟ್‌ನಲ್ಲಿ ಇನ್ನೊಬ್ಬರು ಕುಳಿತುಕೊಳ್ಳಬೇಕಾದೀತು!

ಘಾಟ್‌ನಲ್ಲಿ ಅಲ್ಲಲ್ಲಿ 'ನಿಮ್ಮ ಬ್ರೇಕ್ ಪರೀಕ್ಷಿಸಿಕೊಳ್ಳಿ', 'ಸೆಕೆಂಡ್ ಗೇರ್‌ನಲ್ಲಿ ನಿಧಾನವಾಗಿ ಇಳಿಯಿರಿ' ಎಂಬ ಸೂಚನಾ ಫಲಕಗಳು ಕಾಣ ಸಿಗುತ್ತವೆ. ಅದನ್ನು ಪಾಲಿಸದಿದ್ದರೆ ಅಪಾಯದ ಕದ ತಟ್ಟುವುದು ಖಚಿತ. ಕೆಲವೊಂದು ವಾಹನಗಳು ಮಿತಿ ಮೀರಿದ ವೇಗದಲ್ಲಿ ಸಂಚರಿಸಿ ತಡೆಗೋಡೆಗಳಿಗೆ ಡಿಕ್ಕಿ ಹೊಡೆದು ಪ್ರಪಾತಕ್ಕೆ ಉರುಳಿದ ಕುರುಹುಗಳೂ ಇಲ್ಲಿವೆ. ಹಾಗಾಗಿ ಸುರಕ್ಷಿತ ಪ್ರಯಾಣಕ್ಕಾಗಿ ಫಸ್ಟ್ ಅಥವಾ ಸೆಕೆಂಡ್ ಗೇರ್‌ನಲ್ಲೇ ಸಂಚರಿಸಿದರೆ ಉತ್ತಮ. ಮುಂದಿನ ಬಾರಿ ಕೇರಳಕ್ಕೆ ಹೋಗುವಾಗ ರಾಷ್ಟ್ರೀಯ ಹೆದ್ದಾರಿ 212ರಲ್ಲೇ ಹೋಗಿ. ಸುಲ್ತಾನ್ ಬತ್ತೇರಿ ಘಾಟ್‌ನಲ್ಲಿ ಪ್ರಕೃತಿಯ ವೈಶಿಷ್ಟ್ಯವನ್ನು ನೋಡಿ ಕಣ್ಣು ತುಂಬಿಕೊಳ್ಳಿ.

